# ಬೇಕರಿ ಕೇಕಿನ ಗೊಡವೆಯೇ ಬೇಡ...
# ಹಣ್ಣಿನ ಗುಡ್ಡದ ಸಂಭ್ರಮ ನೋಡಾ...



ಚಿತ್ರದಲ್ಲಿ ಕಾಣುತ್ತಿರುವುದು ಕೇಕ್‌ಗೆ ಪರ್ಯಾಯವಾಗಿ ರೂಪಿಸಿದ ಹಣ್ಣಿನ ಕೇಕ್. ಈಚೆಗೆ ಮೊಮ್ಮಗಳ ಹುಟ್ಟುಹಬ್ಬಕ್ಕೆಂದು ಕೇಕ್ ಬದಲಿಗೆ ಹಣ್ಣುಗಳಿಂದಲೇ ಕೇಕ್ ಮಾದರಿಯನ್ನು ನಿರ್ಮಿಸಿ, ಅತಿಥಿಗಳೆಲ್ಲರ ಹುಬ್ಬೇರುವಂತೆ ಮಾಡಿದ ಕ್ಷಣ ಸಾರ್ಥಕವೆನಿಸಿತು.

ಹುಟ್ಟುಹಬ್ಬದಲ್ಲಿ ಬೇಕರಿ ಕೇಕ್, ಕ್ರೀಮ್, ಚಿಪ್ಸ್‌ಗಳಿಗೆ ಜಾಗವಿರಲಿಲ್ಲ. ಅವುಗಳ ಬದಲಿಗೆ ತರಹೇವಾರಿ ತಾಜಾ ಹಣ್ಣುಗಳು ವಿಶೇಷ ಆತಿಥ್ಯ ವಹಿಸಿದ್ದವು. ಜೊತೆಗೆ ಮನೆಯಲ್ಲೇ ಮಾಡಿದ ಉಪಾಹಾರ. ಹಣ್ಣುಗಳನ್ನು ಕತ್ತರಿಸಿ ಪಿರಮಿಡ್‌ನಂತೆ ಪೇರಿಸಿ, ಆಕರ್ಷಕವಾಗಿ ಅಲ್ಲಲ್ಲಿ ಸಣ್ಣ ದೀಪ ಅಳವಡಿಸಿ ಕೇಕಿನಂತೆಯೇ ನಿರ್ಮಿಸಲಾಗಿತ್ತು. ಅದನ್ನು ಮಕ್ಕಳು ಬೆರಗುಗಣ್ಣಿನಿಂದ ನೋಡಿ ಕುಣಿದು ಕುಪ್ಪಳಿಸಿದರು.

ಕೇಕ್ ರಚನೆಯ ಮಾದರಿಯಂತೆ ಇದ್ದ ಹಣ್ಣಿನ ಗುಡ್ಡದ ಸುತ್ತಲು ಪಾರದರ್ಶಕ ಗ್ಲಾಸುಗಳಲ್ಲಿ ಎಳೆ ಸೌತೆ, ಉದ್ದುದ್ದಾಗಿ ಕತ್ತರಿಸಿದ ಗಜ್ಜರಿ ಇಡಲಾಗಿತ್ತು. ಸ್ವಲ್ಪ ಉಪ್ಪು, ಮೆಣಸಿನಕಾಳಿನ ಪುಡಿಯನ್ನು ನವಿರಾಗಿ ಸವರಲಾಗಿತ್ತು. ಹುಟ್ಟುಹಬ್ಬದ ಹುಡುಗಿ 'ಹಣ್ಣಿನ ಕೇಕ್' ಕತ್ತರಿಸಿದ್ದೇ ತಡ ಎಲ್ಲರಿಗೂ ಹಣ್ಣು ಮತ್ತು ಸಲಾಡ್ ಹಂಚಲಾಯಿತು. ಹಾಡು ಕುಣಿತದ ಜೊತೆ ಹಿರಿಕಿರಿಯರೆಲ್ಲರೂ ಸಂತಸದಿಂದ ಸವಿದ ಈ ಫಲಾಹಾರದ ಸ್ವಾದಕ್ಕೆ ಎಲ್ಲರೂ ಮನಸೋತರು. ಮೇಣದ ದೀಪ ಆರಿಸಿ, ಸಕ್ಕರೆ ಮೈದಾ ಹಿಟ್ಟಿನ ಕೇಕ್ ಕತ್ತರಿಸಿ, ಮೈಗೆಲ್ಲಾ ಕ್ರೀಮ್ ಬಳಿಯುವ ಬದಲು ಹಣ್ಣುಗಳಿಂದ ರಚಿಸಿದ ಕೇಕ್ ಮಾದರಿಯನ್ನು ಎಲ್ಲರೂ ಮಾಡಿ, ಹುಟ್ಟುಹಬ್ಬ ಆಚರಿಸುವುದು ಅರ್ಥಪೂರ್ಣವೂ ಹೌದು.

–ಆರ್.ಟಿ. ಶರಣ್, ಕಲಬುರಗಿ



# ಬಾಯಿ ಬೀಗ

ಹೆಚ್ಚಿಗೆ ಮಾತನಾಡುವವರಿಗೆ... 'ಏನ್ ಮಾತಾಡ್ತೀಯಾ? ಸ್ವಲ್ಪ ಬಾಯಿಗೆ ಬೀಗ ಹಾಕ್ತೀಯಾ?' ಎಂದು ಬೈಯುವುದು ನಾವು ನೀವೆಲ್ಲರೂ ಕೇಳಿರಬೇಕು ಅಲ್ಲವೇ. ಹಾಗೆಯೇ, ಗಂಗಾವತಿ ಪ್ರಾಣೇಶ್ ಅವರು ಹಾಸ್ಯದ ಕಾರ್ಯಕ್ರಮದಲ್ಲಿ ಮಹಿಳೆಯರು ಹೆಚ್ಚಾಗಿ ಮಾತನಾಡುವುದರಿಂದ ಅವರಿಗೆ 'ಮಾತೆಯರು' ಎಂದು ಕರೆಯಲಾಗುತ್ತದೆ ಎಂದು ಹೇಳಿದ್ದನ್ನು ನಾವುಗಳು ಕೇಳಿದ್ದೇವೆ.

ಇತ್ತೀಚೆಗೆ, ದಾವಣಗೆರೆಯ ವಿದ್ಯಾನಗರದಲ್ಲಿರುವ ದೃಶ್ಯ ಕಲಾ ಮಹಾವಿದ್ಯಾಲಯದಲ್ಲಿ ಥೀಮ್ ಪಾರ್ಕ್ ನೋಡಲೆಂದು ಮೊಮ್ಮಕ್ಕಳೊಂದಿಗೆ ಹೋದಾಗ ಮಹಿಳೆಯ ಬಾಯಿಗೆ ಬೀಗ ಹಾಕಿದ ಹಾಗೂ ಅದರ ಕೀಲಿ ಕೈ ತೂಗಿಹಾಕಿದ್ದ ಕಲಾಕೃತಿ ನನ್ನ ಮೊಮ್ಮಕ್ಕಳ ಗಮನಸೆಳೆಯಿತು. ಬಾಯಿಗೆ ಬೀಗ ಹಾಕಿದ ಕಲಾಕೃತಿಯು ನಾನು ಮಕ್ಕಳನ್ನು 'ಬಾಯಿಗೆ ಬೀಗ ಹಾಕು' ಎಂದು ಬೈಯುತ್ತಿದ್ದುದನ್ನು ನೆನಪಿಸಿತು. ಅಂದಹಾಗೆ ಈ ಕಲಾಕೃತಿ ದೃಶ್ಯ ಕಲಾ ಮಹಾವಿದ್ಯಾಲಯದ ಕಲಾ ವಿದ್ಯಾರ್ಥಿಗಳ ರಚನೆಯಾಗಿದೆ.

–ಅನುರಾಧ ಟಿ., ದಾವಣಗೆರೆ

# ರೆಚ್ಚೇವು: ಬೇರಿನದ್ದಲ್ಲ, ಕಾಂಡದ ಗೆಡ್ಡೆ

ಚಿತ್ರದಲ್ಲಿ ಕಾಣುತ್ತಿರುವುದು 'ರೆಚ್ಚೇವು' ಎಂದು ತುಳುವಿನಲ್ಲಿ ಕರೆಯುವ ಕಾಡು ಕೆಸುವಿನ ಗೆಡ್ಡೆ. ವಾಸ್ತವವಾಗಿ ಇದು ಕಾಂಡದ ಪರಿವರ್ತಿತ ಭಾಗವೇ ಹೊರತು ಬೇರಿನಲ್ಲಿ ಬೆಳೆದ ಗೆಡ್ಡೆಯಲ್ಲ. ಅಲೋಕಾಸಿಯಾ ಪ್ರಭೇದದ ಈ ಸಸ್ಯಗಳಲ್ಲಿ ಗೆಡ್ಡೆ ಎನ್ನಲಾಗುವ ಈ ಭಾಗವನ್ನು 'ಕೋರ್ಮ್' (Corm) ಎಂದು ಕರೆಯುತ್ತಾರೆ. ಕೋರ್ಮ್ ಎಂದರೆ ಭೂಮಿಯೊಳಗೆ ಬೆಳೆದ, ಆಹಾರ ಸಂಗ್ರಹಕ್ಕೆ ರೂಪಾಂತರಗೊಂಡ ಕಾಂಡ. 10ರಿಂದ 20 ಸೆಂ.ಮೀ. ವ್ಯಾಸ ಹಾಗೂ 1ರಿಂದ 3ಅಡಿಗಳಷ್ಟು ಉದ್ದಕ್ಕೆ, ಅರ್ಧ ಭೂಮಿಯ ಒಳಗೂ ಇನ್ನರ್ಧ ಹೊರಗೆ ಬೆಳೆಯುತ್ತದೆ. ಇದನ್ನು ಏಷ್ಯನ್ ಟ್ಯಾರೋ ಎಂದು ಆಂಗ್ಲ ಭಾಷೆಯಲ್ಲಿ ಕರೆಯಲಾಗುತ್ತದೆ. ಪೂರ್ವ ಮತ್ತು ಆಗ್ನೇಯ ಏಷ್ಯಾಕ್ಕೆ ಸ್ಥಳೀಯವಾಗಿರುವ ಹೂ ಬಿಡುವ ಸಸ್ಯವಿದಾಗಿದೆ. ಇದು ಅರಸಿಯೇ ಸಸ್ಯ ಕುಟುಂಬಕ್ಕೆ ಸೇರಿದ್ದು, 5ರಿಂದ 8 ಅಡಿ ಎತ್ತರ ಬೆಳೆಯುತ್ತದೆ. ಹೃದಯಾಕಾರವಿರುವ ಎಲೆಗಳು 1 ಮೀಟರ್ ಉದ್ದಗಿರುತ್ತವೆ. 4ರಿಂದ 10 ಸೆಂ.ಮೀ. ವ್ಯಾಸದ ತೊಟ್ಟಿನ ಕೆಳಭಾಗಗಳು ಕಾಂಡದ ಸುತ್ತಲೂ ಬಿಗಿದಿರುತ್ತವೆ.



ವಿಯೆಟ್ನಾಂನಲ್ಲಿ ಇದನ್ನು ನೆಗಡಿ/ ತಲೆಶೂಲೆಗೆ ಔಷಧಿಯಾಗಿ ಸಾಂಪ್ರದಾಯಿಕವಾಗಿ ಬಳಸುತ್ತಾರೆ. ಗೆಡ್ಡೆಯನ್ನು ತರಕಾರಿಯಾಗಿ ಬಳಸಿದರೂ ಕಚ್ಚಾ ಸೇವಿಸಬಾರದು. ಸರಿಯಾಗಿ ಬೇಯಿಸದ ಗೆಡ್ಡೆಗಳನ್ನು ತಿನ್ನುವುದರಿಂದ ಅನ್ನನಾಳದಲ್ಲಿ ತುರಿಕೆಯಾಗುತ್ತದೆ. ಪಿಷ್ಟ ಅಧಿಕವಿದ್ದರೂ ನಾರಿನಂಶ ಹೊಂದಿರುವ ಆಹಾರ ಪದಾರ್ಥವಿದು. ಆಗೆಲ್ಲಾ ಹಳ್ಳಿಗಾಡುಗಳಲ್ಲಿ ಜನರು ಇದರ ಪಲ್ಯ ಮಾಡಿ ಸೇವಿಸುತ್ತಿದ್ದರು. ಸ್ವಾದದಲ್ಲಿ ಸುವರ್ಣ ಗೆಡ್ಡೆಯಂತಿದ್ದು,ಅದಕ್ಕಿಂತ ಸ್ವಲ್ಪ ಕಡಿಮೆ ರುಚಿ ಮತ್ತು ಹೆಚ್ಚು ಗಟ್ಟಿಯಾಗಿರುತ್ತದೆ. ಇದು ಉಷ್ಣ ಪ್ರಕೃತಿಯದ್ದಾಗಿರುವುದರಿಂದ ಉಳ್ಳವರು ಇದರ ಬದಲಿಗೆ ಸುವರ್ಣ ಗೆಡ್ಡೆ ಬಳಸುತ್ತಿದ್ದರು. ಇಂದಿನ ಕಾಲದಲ್ಲಿ ಯಾರೂ ಇದನ್ನು ಬಳಸದಿರುವುದರಿಂದ ಈಗಿನ ಪೀಳಿಗೆಗೆ ಇದೊಂದು ಆಹಾರ ವಸ್ತುವೆಂದು ತಿಳಿದಿರಲಾರದು.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ